153 ನೇ 6 ನಿ=72= (108)
4 ಗ
0107.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ. ನಾಗರಾಜು ಇವರು ನಿಯಮ 72ರ ಮೇರೆಗೆ ನೀಡಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ**

**ವಿಷಯ:**

ಬೆಂಗಳೂರು ನಗರದ ಹೃದಯ ಭಾಗದಲ್ಲಿ ಸ್ಥಾಪಿತವಾದ ಆರ್.ಟಿ.ನಗರ ಪೋಲೀಸ್ ಠಾಣೆಯಿಂದ ಡಾ॥ಅಂಬೇಡ್ಕರ್ ಮೆಡಿಕಲ್ ಕಾಲೇಜುವರೆಗೆ ಸಂಪರ್ಕ ಕಲ್ಪಿಸುವ ರಸ್ತೆಯಾದ ದಿನ್ನೂರು ಮುಖ್ಯ ರಸ್ತೆಯನ್ನು ಅಗಲೀಕರಣಗೊಳಿಸಿ ಅಭಿವೃದ್ಧಿ ಪಡಿಸಲು ಸುಮಾರು 25 ವರ್ಷಗಳ ಹಿಂದೆ ಯೋಜಿಸಿದ್ದು, ಇಲ್ಲಿವರೆಗೆ ಈ ಯೋಜನೆ ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಇದರಿಂದಾಗಿ ವಾಹನ ಸವಾರರು, ಆಂಬುಲೆನ್ಸ್ ಮತ್ತು ಇತರೆ ವಾಹನ ಸವಾರರಿಗೆ ಸಾಕಷ್ಟು ತೊಂದರೆ ಉಂಟಾಗುತ್ತಿದ್ದು, ಇದಲ್ಲದೇ ವಾಹನ ದಟ್ಟಣೆಯಿಂದ ಪರಿಸರ ಮೇಲೆಯು ಅಡ್ಡ ಪರಿಣಾಮ ಉಂಟಾಗುತ್ತಿದೆ. ಇದರಂತೆಯೇ ಟ್ಯಾನರಿ ರಸ್ತೆಯು (ಟ್ಯಾನರಿ ರಸ್ತೆಯ ಖಸಾಯಿ ಖಾನೆಯಿಂದ ನಾಗವಾರದವರೆಗೆ) ಈ ರಸ್ತೆಯು ಸಹ ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸಲು ಯೋಜಿಸಲಾಗಿತ್ತು. ಈಗ ಈ ಭಾಗದಲ್ಲಿ ಮೆಟ್ರೋ ಸಹ ಕಾರ್ಯರೂಪಕ್ಕೆ ಬರುತ್ತಿದ್ದು, ಮೆಟ್ರೋ ಕಾರ್ಯ ಪ್ರಾರಂಭವಾಗಿರುತ್ತದೆ. ಇದರಿಂದ ವಾಹನ ಸವಾರರಿಗೆ ಸಾಕಷ್ಟು ತೊಂದರೆ ಮತ್ತು ಅಡಚಣೆಗಳು ಉಂಟಾಗುತ್ತಿದ್ದು, ಯಾವುದೇ ಪರ್ಯಾಯ ವ್ಯವಸ್ಥೆಯು ಸಹ ಆಗಿರುವುದಿಲ್ಲ. ಆದ್ದರಿಂದ, ಈ ಹಿಂದೆ ಯೋಜಿಸಿರುವಂತೆ ಸದರಿ ಎರಡು ರಸ್ತೆಗಳ ಅಗಲೀಕರಣ ಸಂಬಂಧ ಕೈಗೊಂಡಿರುವ ಎಲ್ಲಾ ಕ್ರಮದ ಬಗ್ಗೆ ಮಾಹಿತಿ ಮತ್ತು ದಾಖಲಾತಿಗಳನ್ನು ನೀಡಲು ಮತ್ತು ಈ ಕುರಿತು ಸರ್ಕಾರ ಮುಂದಿನ ದಿನಗಳಲ್ಲಿ ಕೈಗೊಳ್ಳುವ ಕ್ರಮಗಳ ಬಗ್ಗೆ ಮಾಹಿತಿ ನೀಡುವ ಕುರಿತು.

**ಉತ್ತರ:**

**ಅ) ದಿನ್ನೂರು ಮುಖ್ಯ ರಸ್ತೆಯ ಅಗಲೀಕರಣ:** ಈ ರಸ್ತೆಯನ್ನು ಅಗಲೀಕರಣಗೊಳಿಸಿ ಅಭಿವೃದ್ಧಿ ಪಡಿಸಲು ಆರ್.ಎಂ.ಪಿ–2015 ರಂತೆ 24.00 ಮೀ ಅಗಲಕ್ಕೆ ಪ್ರಸ್ತಾಪಿಸಲಾಗಿರುತ್ತದೆ. ಈ ರಸ್ತೆಗೆ ಅಗತ್ಯವಾದ ಭೂಮಿಯನ್ನು ಖಾಸಗಿ ಭೂ–ಮಾಲೀಕರು ಟಿ.ಡಿ.ಆರ್ ಆಧಾರದಲ್ಲಿ ಬಿಟ್ಟುಕೊಡಲು ಒಪ್ಪದಿರುವುದರಿಂದ ಮತ್ತು ನಗದು ರೂಪದಲ್ಲಿ ಭೂ–ಸ್ವಾಧೀನ ಪಡಿಸಿಕೊಳ್ಳಲು ಸುಮಾರು ರೂ.200.00 ಕೋಟಿಗಳಿಗೂ ಅಧಿಕ ಮೊತ್ತ ಬೇಕಾಗುವುದೆಂದು ಅಂದಾಜಿಸಲಾದ ಹಿನ್ನಲೆಯಲ್ಲಿ ಸದರಿ ಯೋಜನೆಯನ್ನು ಪ್ರಾರಂಭಿಸಲಾಗಿರುವುದಿಲ್ಲ.

ಆದರೆ, ಸದರಿ ರಸ್ತೆಗೆ ಆದ್ಯತೆಯ ಮೇಲೆ ಹಾಲಿ ಇರುವ ರಸ್ತೆ ಅಗಲಕ್ಕೆ ಸೀಮಿತಗೊಳಿಸಿ ವೈಟ್ ಟಾಪಿಂಗ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರವು 2023–24ನೇ ಆಯವ್ಯಯದಲ್ಲಿ ರೂ.10.19 ಕೋಟಿಗಳನ್ನು ಒದಗಿಸಿದ್ದು, ಸದರಿ ಕಾಮಗಾರಿಗೆ ಈಗಾಗಲೇ ಟೆಂಡರ್ ಕರೆಯಲಾಗಿದ್ದು (ಎರಡನೇ ಕರೆ), ಟೆಂಡರ್ ಅನುಮೋದನೆ ಹಂತದಲ್ಲಿದೆ.

ಆರ್.ಟಿ.ನಗರ ಪೊಲೀಸ್ ಠಾಣೆಯಿಂದ ಡಾ॥ಅಂಬೇಡ್ಕರ್ ಮೆಡಿಕಲ್ ಕಾಲೇಜುವರೆಗೂ ರಸ್ತೆಯ ಸುಗಮ ಸಂಚಾರಕ್ಕಾಗಿ ಡಾಂಬರೀಕರಣವನ್ನು ಮಾಡಲಾಗಿರುತ್ತದೆ. ದಿನ್ನೂರು ಮುಖ್ಯರಸ್ತೆಯನ್ನು ಮೆಟ್ರೋ ಕಾಮಗಾರಿ ನಡೆಯುತ್ತಿರುವ ರಸ್ತೆಗೆ ಸಂಪರ್ಕಿಸುವ ನಾಗವಾರ ರಸ್ತೆಗೆ ಸಂಪರ್ಕ ಕಲ್ಪಿಸಲಾಗುತ್ತಿದ್ದು, ವಾಹನ ದಟ್ಟಣೆ ಕಡಿಮೆಗೊಳ್ಳುವ ನಿರೀಕ್ಷೆ ಇರುತ್ತದೆ.

**ಆ) ಟ್ಯಾನರಿ ರಸ್ತೆಯ ಅಗಲೀಕರಣ:** ರಸ್ತೆಯ ಇಕ್ಕೆಲಗಳಲ್ಲಿ ಇರುವ ಖಾಸಗಿ ಭೂ–ಮಾಲೀಕರು ಟಿ.ಡಿ.ಆರ್ ಆಧಾರದಲ್ಲಿ ತಮ್ಮ ಭೂಮಿಯನ್ನು ಬಿಟ್ಟುಕೊಡಲು ಒಪ್ಪದಿರುವುದರಿಂದ ಮತ್ತು ನಗದು ರೂಪದಲ್ಲಿ ಭೂ–ಸ್ವಾಧೀನ ಪಡಿಸಿಕೊಳ್ಳಲು ಸುಮಾರು ರೂ.300.00 ಕೋಟಿಗಳಿಗೂ ಅಧಿಕ ಮೊತ್ತ ಬೇಕಾಗುವುದೆಂದು ಅಂದಾಜಿಸಲಾದ ಹಿನ್ನಲೆಯಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಗಿರುವುದಿಲ್ಲ.

ಮೆಟ್ರೋ ಕಾಮಗಾರಿಯನ್ನು ಸಮೂಹ ಸಾರಿಗೆ ವ್ಯವಸ್ಥೆಯ ಅಡಿಯಲ್ಲಿ (Mass Transport System) ಕೈಗೆತ್ತಿಕೊಳ್ಳಲಾಗಿದ್ದು, ಮೆಟ್ರೋ ಸ್ಟೇಷನ್ ಕಾಮಗಾರಿಗಳು ಪೂರ್ಣಗೊಂಡು ಕಾರ್ಯಾರಂಭ ಮಾಡುವುದನ್ನು 2026ಕ್ಕೆ ಯೋಜಿಸಲಾಗಿದೆ. ಮೆಟ್ರೋ ಸ್ಟೇಷನ್ ಪ್ರದೇಶಗಳನ್ನು ಹೊರತುಪಡಿಸಿ ಹಾಲಿ ಇರುವ ರಸ್ತೆ ಅಗಲಕ್ಕೆ ಸಿಮೀತಗೊಳಿಸಿ ವೈಟ್ ಟಾಪಿಂಗ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿ ದಿನಾಂಕ: 13.03.2024 ರಂದು ಗುತ್ತಿಗೆದಾರರಾದ ಮೆ॥ ಆರ್.ಎನ್.ಎಸ್ ಎಂಬ ಸಂಸ್ಥೆಗೆ ರೂ.23.22 ಕೋಟಿಗಳಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು 11 ತಿಂಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿರುತ್ತದೆ.

**ಸಂಖ್ಯೆ: ನಅಇ 392 ಎಂಎನ್‌ವೈ 2024 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ